ರಾಮಸ್ವಾಮಿಯವರೂ ಸೇರಿದಂತೆ ಎರಡೂ ಪಂಗಡದವರಿಗೂ ಮತ್ತು ಗ್ರಾಮಸ್ಥರಿಗೂ ಶಾಂತಿ ಸುವ್ಯಸ್ಥೆ ಕಾಪಾಡಿಕೊಂಡು ಬರಲು ಮನದಿ ಮಾಡಿದ್ದಾರೆ ತನಿಖೆ ಮುಂದುವರೆದಿದೆ. ಪರಿಸ್ಥಿತಿ ಶಾಂತವಾಗಿದೆ. ಜಿಲ್ಲಾ ಸಶಸ್ತ್ರ ಪಡೆಯ ಒಂದು ತುಕಡಿಯನ್ನು ಸಹ ಈ ಗ್ರಾಮದಲ್ಲಿ ಇಡಲಾಗಿದೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಬೆಳಗಾಂ ಜಿಲ್ಲೆಯ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನಲ್ಲಿ ಲಿಫ್ಟ್ ಇರಿಗೇಷನ್ ಯೋಜನೆ

ಎಸ್.ಹೆಚ್. ಕೌಜಲಗಿ (ಬೈಲಹೊಂಗಲ): ಮಾನ್ಯ ಅಧ್ಯಕ್ಷರೆ ಬೆಳಗಾಂ ಜಿಲ್ಲೆಯ ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕಿನ ಜಮೀನುಗಳು ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾಗಿರುತ್ತವೆ. ಈ ಮುಳುಗಡೆಯಾದ ಜಮೀನು ಮಾಲೀಕರಿಗೆ ನೀರನ್ನು ಕೊಡುವ ಉದ್ದೇಶದಿಂದ ಅಲ್ಲಿ ಎಂಬು ಲಿಫ್ಟ್‌ಇರಿಗೇಶನ್‌ಗಳನ್ನು ಮಾಡಲಾಗಿದೆ.

ಮಾಟೊಳ್ಳಿ ಏಣಗಿ ವಕ್ಕುಂದ ಹಾಗೂ ಸುತ್ತಗಟ್ಟಿ ಮತ್ತು ಸಂಗೊಳ್ಳಿ ದೇವಲಾಪುರ ಗ್ರಾಮದ ಜಮೀನುಗಳು ಲಿಫ್ಟ್ ಇರಿಗೇಶನ್ ಕಮಾಂಡ್ ಏರಿಯಾದಲ್ಲಿ ಬರುತ್ತವೆ. ಈ ಗ್ರಾಮದ ಜಮೀನುಗಳು ಲಿಫ್ಟ್ ಇರಿಗೇಶನ್ ಕಮಾಂಡ್ ಏರಿಯಾದಲ್ಲಿ ಬರುತ್ತಿದ್ದರೂ ಕೂಡ ಈ ಜಮೀನುಗಳು ಟೆಲೆಎಂಡ್‌ನಲ್ಲಿ ಇರುವುದರಿಂದ ನೀರು ಸರಿಯಾಗಿ ಜಮೀನುಗಳಿಗೆ ಬರುವುದಿಲ್ಲ.

ಈಗಾಗಿ ಮಟೊಳ್ಳಿ ಏಣಗಿ ವಕ್ಕುಂದ ಸಂಗೋಳ್ಳಿ ದೇವಲಾಪುರ ಗ್ರಾಮಗಳಲ್ಲಿ ಅಗಮೆಂಟೇಶನ ಆಫ್ ಲಿಫ್ಟ್ ಇರಿಗೇಶನ್ ಸ್ಕೀಂ ಮಾಡಬೇಕೆಂದು ಅಲ್ಲಿಯ ಇಂಜಿನಿಯರುಗಳ ಅಭಿಪ್ರಾಯವಿದ್ದು ಹಾಗೂ ಈ ಲಿಫ್ಟ್ ಇರಿಗೇಶನ್ ಸ್ಕೀಂಗಳನ್ನು ತೆಗೆದುಕೊಳ್ಳಬೇಕೆಂದು ಸ್ಥಳಿಯ ಕಾಡಾ ಮೀಟಿಂಗ್‌ನಲ್ಲಿ ಮತ್ತು ಇರಿಗೇಶನ್ ಮೀಟಿಂಗ್‌ನಲ್ಲಿ ನಿರ್ಣಯ ಸಹ ಆಗಿರುತ್ತದೆ.

ಆದ ಕಾರಣ ತಜ್ಞರ ಅಭಿಪ್ರಾಯದ ಪ್ರಕಾರ ಮತ್ತು ಮೇಲೆ ಬರೆದ ಮೀಟಿಂಗ್‌ಗಳಲ್ಲಿ ಠರಾಯಿಸಿದ ಪ್ರಕಾರ ಅಲ್ಲಿ ಕೂಡಲೇ ಲಿಫ್ಟ್‌ಇರಿಗೇಶನ್ ಸ್ಕೀಂಗಳನ್ (ಅಗ್‌ಮೆಂಟೇಶನ್) ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಭಾರಿ ಮತ್ತು ದೊಡ್ಡ ನೀರಾವರಿ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾನೂನು ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ಭಾರಿ ಮತ್ತು ಮಧ್ಯಮ ನೀರಾವರಿಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ.

ಮಲಪ್ರಭಾ ಯೋಜನೆಯಲ್ಲಿ ಮುಳುಗಡೆಯಾದ ಗ್ರಾಮಗಳ ಜಮೀನುಗಳಿಗೆ ನೀರನ್ನು ಒದಗಿಸುವ ಉದ್ದೇಶದಿಂದ ಎಂಟು ಏತ ನೀರಾವರಿ ಯೋಜನೆಗಳನ್ನು ನಿರ್ಮಾಣ ಮಾಡಲಾಗಿದೆ. ಆ ಯೋಜನೆಗಳ ವಿವರಗಳು ಈ ರೀತಿ ಇವೆ:

ಯೋಜನೆಯ ಹೆಸರು	ಉದ್ದೇಶಿತ ನೀರಾವರಿ ಪ್ರದೇಶ (ಹೆಕ್ಟೇರುಗಳಲ್ಲಿ)	ನೀರಾವರಿ ಆದ ಪ್ರದೇಶ (ಹೆಕ್ಟೇರುಗಳಲ್ಲಿ)
1. ಸವದತ್ತಿಯ ಹೆಡ್‌ರೆಗ್ಯೂಲೇಟರ್	8093	6393
2. ಸಿಂಗಾರಕೊಪ್ಪ	2913	3917
3. ಫಳಗಿ ಹಿಟಣಗಿ	1884	1863

4.	ಕೆಂಗನೂರು	2913	2243
5.	ಬೂದಿಹಾಳ್	1478	1419
6.	ಜಾಲಿಕೊಪ್ಪ	1952	1831
7.	ಹೊಸೂರ್‌ಒಕ್ಕುಂದ	1277	1162
8.	ಮಲ್ಲೂರ್‌ಮಟೊಳ್ಳಿ	2832	2240
	ಒಟ್ಟು	23342	21140

ಉದ್ದೇಶಿತ ನೀರಾವರಿ ಪ್ರದೇಶಕ್ಕೆ ಸಂಪೂರ್ಣವಾಗಿ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ, ಎಂಬ ಅಂಶವು ಮೇಲಿನ ವಿವರಗಳಿಂದ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಪೆಡ್ ರೀಚ್‌ನಲ್ಲಿ ಇರುವ ರೈತರು ಜಾಸ್ತಿ ನೀರನ್ನು ಬಳಸಿಕೊಳ್ಳುವ ಪ್ರವೃತ್ತಿ ಇರುವುದರಿಂದ ಟೈಲೆಂಡ್ ರೀಚ್‌ನವರಿಗೆ ಕಡಿಮೆ ಪ್ರಮಾಣದ ನೀರು ಲಭ್ಯವಾಗುತ್ತದೆ. ಈ ರೀತಿ ಟೈಲೆಂಡ್ ಪ್ರದೇಶಕ್ಕೆ ನೀರು ಕಡಿಮೆಯಾಗಿದ್ದರೆ ಈ ಪ್ರದೇಶಗಳಿಗೆ ಪರ್ಯಾಯ ವ್ಯವಸ್ಥೆ ಏನಾದರೂ ಮಾಡಲು ಸಾಧ್ಯವಿದೆಯೇ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕೊಲಾರ ಜಿಲ್ಲೆ ರೈತರಿಗೆ ವಿದ್ಯುಚ್ಛಕ್ತಿ ಅಭಾವದಿಂದ ತೊಂದರೆ

ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಗಿನ ವಿಷಯದ ಬಗ್ಗೆ ಹೇಳಿಕೆ ನೀಡಬೇಕೆಂದು ವಿನಂತಿ:

ಕೋಲಾರ ಜಿಲ್ಲಾ ರೈತರಿಗೆ ವಿದ್ಯುಚ್ಛಕ್ತಿ ಅಭಾವವನ್ನು ನೀಗಲು 125ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆಯಾಗುವಂತಹ ಡೀಸೆಲ್ ಜನರೇಟರ್ ಒಂದನ್ನು ಸ್ಥಾಪನೆ ಮಾಡಲು ಸೂಮಾರು ಎರಡು ವರ್ಷಗಳಿಂದ ಸರ್ಕಾರದವರು ಹೇಳಿಕೆ ಕೊಡುತ್ತಿದ್ದಾರೆ ಮತ್ತು ಜರೂರಾಗಿ ಸ್ಥಾಪನೆ ಮಾಡಲು ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದಾಗಿ ಸರ್ಕಾರದವರೂ ವಿಧಾನ ಸಭೆಯಲ್ಲಿ ಉತ್ತರ ಕೊಟ್ಟಿರುತ್ತಾರೆ. ಆದರೆ ಸ್ಥಾಪನೆಯ ಬಗ್ಗೆ ಯಾವ ಕಾರ್ಯಕ್ರಮ ಕೈಗೊಂಡಂತಿಲ್ಲ, ಇದರ ಬಗ್ಗೆ ಸ್ಥಾಪನೆ ಮಾಡಿರುವ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ಹೇಳಿಕೆ ಕೊಡುವುದಲ್ಲದೆ ಕನಿಷ್ಠ ಎಷ್ಟು ತಿಂಗಳಲ್ಲಿ ಪ್ರಾರಂಭ ಮಾಡುತ್ತಾರೆ. ಇತ್ತೀಚೆಗಂತೂ ವಿದ್ಯುಚ್ಛಕ್ತಿ ಸರಬರಾಜು ಸರಿಯಾಗಿಲ್ಲದೆ ರೈತರಿಗೆ ತೊಂದರೆಯಾಗಿದೆ ಕೂಡಲೇ ಡೀಸಲ್ ಜನರೇಟರ್ ಸ್ಥಾಪನೆ ಮಾಡಲು ಕಾರ್ಯಕ್ರಮ ಕೈಗೊಳ್ಳುವುದು ಹಾಗೇನಾದರೂ ತೊಂದರೆಗಳಿದ್ದಲ್ಲಿ ಅವುಗಳನ್ನು ನಿವಾರಣೆ ಮಾಡಿಕೊಂಡು ಕಾರ್ಯಕ್ರಮ ಕೈಗೊಳ್ಳವುದು.

ಶ್ರೀ ಎಂ ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ಪೋಲ್ವೇಜ್ ಪರಿಸ್ಥಿತಿಯನ್ನು ಸುಧಾರಿಸಲು ನಾಲ್ಕು ಆಯ್ದ ಸ್ಥಳಗಳಲ್ಲಿ ಡೀಸೆಲ್ ಜನರೇಟಿಂಗ್ ಸೆಟ್ ಸ್ಥಾಪಿಸುವ ಪ್ರಾಸ್ತಾವನ್ನು ಕರ್ನಾಟಕ ನಿಗಮವು ತಯಾರಿಸಿತ್ತು. ಈ ಸ್ಥಳಗಳು ಬೀದರ್ 'ಇಂಡಿ' ಜಮಖಂಡಿ ಮತ್ತು ಕೋಲಾರ ಆಗಿರುತ್ತದೆ. ಒಟ್ಟು 77.76 ಮೆಗಾವ್ಯಾಟ್ ಸಾಮರ್ಥ್ಯದ ಯೋಜನೆಯಲ್ಲಿ ಪ್ರತಿ ಸ್ಥಳದಲ್ಲಿ 19.44 ಮೆಗಾ ವ್ಯಾಟ್ ಸಾಮರ್ಥ್ಯದ ಘಟಕಗಳನ್ನು ಸ್ಥಾಪಿಸುವ ಯೋಜನೆ ಇದೆ. ಅದೆಲ್ಲಾ ಘಡಕಗಳಿಂದ ವಾರ್ಷಿಕ 420 ದಶಲಕ್ಷ ಯೂನಿಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸ ಬಹುದು. 58 ಕೋಟಿ ರೂಪಾಯಿಗಳ ಅಂದಾಜು ವೆಚ್ಚದ ಈ ಯೋಜನೆಗೆ ಫೆಬ್ರವರಿ 1987ರಲ್ಲಿ ಕೇಂದ್ರ ಯೋಜನಾ ಆಯೋಗ ಒಪ್ಪಿಗೆ ನೀಡಿದೆ. ಈ ಯೋಜನೆಯ ಈಗಿನ ಅಂದಾಜು ವೆಚ್ಚದ ಸುಮಾರು 90ಕೋಟಿ ರೂಪಾಯಿಗಳು. ಈ ಯೋಜನೆಯನ್ನು ಮುಂದೂಡಿತ ಸಾಲಗಳ ಮೂಲಕ ಹಣ ತೊಡಗಿಸುವ ಯೋಜನೆ ಇತ್ತು. ಈ ರೀತಿಯಲ್ಲಿ ಕಾರ್ಯಗತ ಗೊಳಿಸಲಾಗಲಿಲ್ಲ. ಈಗ ವಿಧೇಶಿ ನೆರವಿನಿಂದ ಈ ಯೋಜನೆಯನ್ನು ಮತ್ತು ಕೈಗೆತ್ತಿಕೊಳ್ಳುವ ಯೋಜನೆ ಇದೆ. ಇದಲ್ಲದೆ ಈ ಯೋಜನೆಯನ್ನು ಖಾಸಗಿ ಸಂಸ್ಥೆಗಳ ಸಹಭಾಗಿತ್ವದಿಂದಲೂ ಕೈಗೆತ್ತಿಗೊಳ್ಳಲು ಪತ್ರಿಕೆಗಳಲ್ಲಿ